# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 377 |
| 2. | ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಐವನ್ ಡಿ 'ಸೋಜಾ (ವಿಧಾನಸಭಾ ಕ್ಷೇತ್ರ) |
| 3. | ಉತ್ತರಿಸುವ ದಿನಾಂಕ | : | 29.01.2026 |
| 4. | ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕರಾವಳಿ ಭಾಗದಲ್ಲಿ ಮಾದಕ ದ್ರವ್ಯ (ಡ್ರಗ್ಸ್) ಚಟುವಟಿಕೆಗಳು ಹೆಚ್ಚುತ್ತಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು; (ವಿವರ ನೀಡುವುದು); | ಕರಾವಳಿ ಭಾಗದಲ್ಲಿ ಮಾದಕ ದ್ರವ್ಯ ಚಟುವಟಿಕೆಗಳು ಹೆಚ್ಚುತ್ತಿರುವ ಬಗ್ಗೆ ಅವುಗಳನ್ನು ತಡೆಗಟ್ಟಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ:-<br>➢ ಡಿಜಿ ಮತ್ತು ಐಜಿಪಿ ಕಛೇರಿ ಸ್ಥಾಯಿ ಆದೇಶ ಸಂಖ್ಯೆ: 1047 ರಲ್ಲಿ ಮಾದಕ ವಸ್ತು ಮತ್ತು ಅದರ ವ್ಯಸನದ ವಿರುದ್ಧ ಜಾಗೃತಿ ಅಭಿಯಾನಗಳನ್ನು ನಡೆಸಲಾಗಿರುತ್ತದೆ.<br>➢ ಎನ್.ಡಿ.ಪಿ.ಎಸ್. ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ತನಿಖೆಯ ಸಂಬಂಧ ಸ್ಥಾಯಿ ಆದೇಶ ಸಂಖ್ಯೆ: 1048 ರಲ್ಲಿ ಎಲ್ಲಾ ತನಿಖಾಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿರುತ್ತದೆ.<br>➢ ಮಾದಕ ವಸ್ತು ಸೇವನೆ ಮತ್ತು ಮಾರಾಟ ಸಂಬಂಧ ಪೊಲೀಸ್ ಠಾಣಾ ಮಟ್ಟದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸ್ಥಾಯಿ ಆದೇಶ ಸಂಖ್ಯೆ:1051ರಲ್ಲಿ ನಿರ್ದೇಶನಗಳನ್ನು ನೀಡಲಾಗಿದೆ.<br>➢ ಮಾದಕ ದ್ರವ್ಯ ಮುಕ್ತ ಕರ್ನಾಟಕ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸನ್ಮಿತ್ರ ಉಪಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಸ್ಥಾಯಿ ಆದೇಶ 1052 ರಲ್ಲಿ ಸೂಚನೆಗಳನ್ನು ನೀಡಲಾಗಿರುತ್ತದೆ.<br>➢ ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿನ ಆರೋಪಿಗಳ ಮಾಹಿತಿಯನ್ನು ಪೊಲೀಸ್ ಐಟಿ ತಂತ್ರಾಂಶ/ NIDAAN ಪೋರ್ಟಲ್‌ನಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಆರೋಪಿಗಳ ದತ್ತಾಂಶ ವಿಶ್ಲೇಷಣೆ ಮಾಡಿ ಆರೋಪಿಗಳ ಚಲನವಲನಗಳ ಮೇಲೆ ನಿಗಾವಹಿಸಲಾಗಿದೆ.<br>➢ ಜಿಲ್ಲಾ ಮಟ್ಟದಲ್ಲಿNCORD (Narcotics Co-ordination) ಸಮಿತಿ ರಚನೆ ಮಾಡಲಾಗಿದೆ. ಎನ್.ಡಿ.ಪಿ.ಎಸ್ ಕಾಯ್ದೆ ಜಾರಿಗೊಳಿಸುವ ಸಂಬಂಧ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ.<br>➢ ಎನ್.ಡಿ.ಪಿ.ಎಸ್ ಪ್ರಕರಣಗಳಲ್ಲಿ ಭಾಗಿಯಾಗುವ ವಿದೇಶಿ ಪ್ರಜೆಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಭಾಗಿಯಾಗುವ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ ಹಾಗೂ ಗಡಿಪಾರು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ, ಮಾದಕ ದ್ರವ್ಯ ಜಾಲ ಕುರಿತು ಸ್ಥಳೀಯ ಬಾತ್ಮೀದಾರರು, ಅಪರಾಧ ವಿಭಾಗದ ಸಿಬ್ಬಂದಿಗಳು ಹಾಗೂ ಬೀಟ್ ಸಿಬ್ಬಂದಿಗಳಿಂದ ಮಾಹಿತಿ ಕಲೆ ಹಾಕಲಾಗುತ್ತಿದೆ. ಪೊಲೀಸ್ ಠಾಣೆಯಲ್ಲಿ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ ಬಗ್ಗೆ ವಿಶೇಷವಾಗಿ ಮಾಹಿತಿಯನ್ನು ಸಂಗ್ರಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ವಿರುದ್ಧ ದೂರು ನೀಡಲು ಟೋಲ್ ಫ್ರೀ ಸಂಖ್ಯೆ: 1933 ಯೋಜನೆಯನ್ನು ಪ್ರಾರಂಭಿಸಿರುವ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಗಿರುತ್ತದೆ.<br>➢ ಸಂಶಯಾಸ್ಪದ ಹೈಸೆಕ್ಯುರಿಟಿ ಸ್ಥಳಗಳಲ್ಲಿ ಬಿಗಿ ನಿಗಾವಣೆ, ಪಾರ್ಸಲ್ ಸರ್ವೀಸ್, ಕೊರಿಯರ್ ಸೆಂಟರ್, ರೆಸಾರ್ಟ್/ ಫಾರ್ಮ್ ಹೌಸ್‌ಗಳಿಗೆ Surprise Inspections (ದಿಢೀರ್ ಭೇಟಿ) ಕೈಗೊಂಡು ನಗರ ಹೊರವಲಯಗಳಲ್ಲಿ ಡ್ರಗ್ಸ್ ಪಾರ್ಟಿಗಳನ್ನು ತಡೆಗಟ್ಟುವ ಬಗ್ಗೆ ವಿಶೇಷ ಪೆಟ್ರೋಲಿಂಗ್ ನಡೆಸಲಾಗಿರುತ್ತದೆ. |

<table>
<tr>
<td>(ಆ)</td>
<td>ಬೇರೆ ರಾಜ್ಯಗಳಿಂದ ಕರ್ನಾಟಕ ರಾಜ್ಯಕ್ಕೆ ದಾಳಿ ನಡೆಸಿ, ಮಾದಕ ದ್ರವ್ಯ ವಿತರಣೆ ಬಗ್ಗೆ ಪತ್ತೆ ಹಚ್ಚಿರುವುದರಿಂದ ರಾಜ್ಯದ ಪೊಲೀಸರು ಮೌನವಾಗಿದ್ದಾರೆ ಎಂಬ ಅಭಿಪ್ರಾಯ ವ್ಯಕ್ತವಾಗಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;</td>
<td>ದಿನಾಂಕ: 21/12/2026 ರಂದು ಮಹಾರಾಷ್ಟ್ರದ ಎ.ಎನ್.ಟಿ.ಎಫ್ (Maharastra Anti Narcotics Task Force) ವಿಭಾಗದ ಅಧಿಕಾರಿಗಳು 1.5 ಕಿಲೋಗ್ರಾಂ ಮೆಫೆಡ್ರೋನ್ ಹೊಂದಿದ್ದ ಆರೋಪದ ಮೇಲೆ ಅಬ್ದುಲ್ ಖಾದರ್ ಎಂಬಾತನನ್ನು ಮುಂಬೈನಲ್ಲಿ ಬಂಧಿಸಿ ನವಿ ಮುಂಬೈನ ವಾಶಿ ಪೊಲೀಸ್ ಠಾಣೆಯ ಮೊ.ಸಂ. 701/2025 ಕಲಂ 8(ಸಿ), 22(ಸಿ) ಎನ್.ಡಿ.ಪಿ.ಎಸ್ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಿದ್ದು, ವಿಚಾರಣೆಯಲ್ಲಿ ಅಬ್ದುಲ್ ಖಾದರ್‌ನು ಈ ಮಾದಕ ವಸ್ತುಗಳನ್ನು ಬೆಳಗಾವಿಯ ಪ್ರಶಾಂತ್ ಪಾಟೀಲ್ ಎಂಬ ವ್ಯಕ್ತಿಯಿಂದ ಪಡೆದುಕೊಂಡಿದ್ದಾಗಿ ತಿಳಿಸಿದ ಮೇರೆಗೆ ಮಹಾರಾಷ್ಟ್ರದ ಎ.ಎನ್.ಟಿ.ಎಫ್ ತಂಡವು ಬೆಳಗಾವಿಯ ಪ್ರಶಾಂತ್ ಪಾಟೀಲ್ ಎಂಬಾತನನ್ನು ಬಂಧಿಸಿರುತ್ತಾರೆ.<br><br>ಬೆಳಗಾವಿಯಲ್ಲಿ ವಶಕ್ಕೆ ಪಡೆದ ಪ್ರಶಾಂತ್ ಪಾಟೀಲ್ ಎಂಬಾತನ ವಿಚಾರಣೆ ಸಂದರ್ಭದಲ್ಲಿ ನೀಡಿದ ಮಾಹಿತಿ ಆಧರಿಸಿ ಮಹಾರಾಷ್ಟ್ರದ ಎ.ಎನ್.ಟಿ.ಎಫ್ ತಂಡವು ಬೆಂಗಳೂರಿಗೆ ಬಂದು ಮುಂದಿನ ಕ್ರಮವಹಿಸಲು ಮೌಖಿಕ ಸಹಕಾರ ಕೋರಿದ್ದು, ಅದರಂತೆ ಬೆಂಗಳೂರು ಪೊಲೀಸರೊಂದಿಗೆ ಜಂಟಿ ಕಾರ್ಯಾಚರಣೆ ನಡೆಸಿ, ರಾಜಸ್ಥಾನ ಮೂಲದ ಸೂರಜ್ ಯಾದವ್ ಹಾಗೂ ಮಲ್ಖಾನ್ ರಾಮಲಾಲ್ ಬಿಷ್ಣೋಯ್ ರವರುಗಳನ್ನು ವಶಕ್ಕೆ ಪಡೆದುಕೊಂಡು ಈಶಾನ್ಯ ವಿಭಾಗದ SOCO ಅಧಿಕಾರಿಗಳ ಸಹಾಯದೊಂದಿಗೆ ಈ ಜಂಟಿ ತಂಡವು ದಿನಾಂಕ: 25.12.2025 ಮತ್ತು ದಿ: 26.12.2025 ರಂದು ಬೆಂಗಳೂರಿನ ಈ ಕೆಳಕಂಡ ವಿಳಾಸದ ಮೂರು ಸ್ಥಳಗಳ ಮೇಲೆ ದಾಳಿ ನಡೆಸಿ ಕಾರ್ಯಾಚರಣೆ ಕೈಗೊಳ್ಳಲಾಯಿತು:-<br><br>1. ಬಾಗಲೂರು ಪೊಲೀಸ್ ಠಾಣಾ ಸರಹದ್ದಿನ RJ Event ಎಂಬ ಸಂಸ್ಥೆಗೆ ಸೇರಿದ ಶೆಡ್, ಕಣ್ಣೂರು.<br>2. ಆವಲಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ಯಾರಪ್ಪನಹಳ್ಳಿಯಲ್ಲಿನ ಒಂದು ಮನೆ.<br>3. ಕೊತ್ತನೂರು ಪೊಲೀಸ್ ಠಾಣಾ ಸರಹದ್ದಿನ NG ಗೊಲ್ಲಹಳ್ಳಿಯ ಫಾರ್ಮ್ ಹೌಸ್ ಒಂದರ ಶೆಡ್.<br><br>ಈ ಜಂಟಿ ಕಾರ್ಯಾಚರಣೆಯಿಂದ ಈ ಕೆಳಕಂಡ ಅಂಶಗಳು ಕಂಡು ಬಂದಿರುತ್ತದೆ:-<br><br>• ಜಂಟಿ ಕಾರ್ಯಾಚರಣೆಯಲ್ಲಿ Mephedrone ಅಥವಾ ಇನ್ನಿತರ ಯಾವುದೇ ಮಾದಕವಸ್ತುಗಳ ತಯಾರಿಕೆಗೆ ಬಳಸಲಾಗುವ ಕಾರ್ಯ ನಿರ್ವಹಣೆ ಹಂತದಲ್ಲಿರುವ ಯಾವುದೇ ತಯಾರಿಕಾ ಘಟಕ ಪತ್ತೆಯಾಗಿರುವುದಿಲ್ಲ.<br>• ದಾಳಿಯ ಸಂದರ್ಭದಲ್ಲಿ 4.2 ಕೆ.ಜಿ ಮೆಫೆಡ್ರೋನ್ ಮತ್ತು 17 ಕೆ.ಜಿ ಇತರೆ ರಾಸಾಯನಿಕ ಸಾಮಾಗ್ರಿಗಳು ದೊರೆತಿರುತ್ತವೆ.<br>• ದಾಳಿಯ ಸಂದರ್ಭದಲ್ಲಿ ಕೇವಲ ಪ್ರಯೋಗಾಲಯದ ಹಳೆಯ ಉಪಕರಣಗಳು, ಬಳಕೆಯಾಗದ ಮಿಕ್ಸರ್‌ಗಳು ಹಾಗೂ ರಾಸಾಯನಿಕ ತುಂಬಿದ ಪಾತ್ರೆಗಳು ಮಾತ್ರ ಕಂಡುಬಂದಿರುತ್ತವೆ.<br>• ದಾಳಿ ವೇಳೆಯಲ್ಲಿ ಪ್ಯಾಕ್ ಮಾಡಲಾಗಿದ್ದ 2 ಪ್ಲಾಸ್ಟಿಕ್ ಬಾಕ್ಸ್‌ಗಳನ್ನು ಹೊರತುಪಡಿಸಿ ಯಾವುದೇ ಧೃಢೀಕೃತ ಸಿದ್ಧ ಮಾದಕವಸ್ತುಗಳು ಪತ್ತೆಯಾಗಿರುವುದಿಲ್ಲ.<br>• ವೈಟ್‌ಫೀಲ್ಡ್ ವಿಭಾಗದ SOCO ಅಧಿಕಾರಿಗಳು ನಡೆಸಿದ ಪರೀಕ್ಷೆ ಸಂದರ್ಭದಲ್ಲಿ Marquis Reagent Test ಪರೀಕ್ಷೆಯಿಂದ Amphetamine ಅಥವಾ ಅದಕ್ಕೆ ಸಮಾನವಾದ ರಾಸಾಯನಿಕ ಇರುವ ಸಾಧ್ಯತೆ ಕಂಡು ಬಂದಿರುತ್ತದೆ.<br>• Ecstasy/Bath Salt Identification Test ಮತ್ತು Amphetamine/ Methamphetamine Test ಪರೀಕ್ಷೆಗಳಿಂದ ನಿರ್ಣಾಯಕ ಫಲಿತಾಂಶ ಲಭ್ಯವಾದ ಕಾರಣ ಜಪ್ತಿಯಾದ ವಸ್ತುಗಳು ಅಶುದ್ಧ ಅಥವಾ ಅಪೂರ್ಣ ರಾಸಾಯನಿಕ ಮಿಶ್ರಣಗಳಾಗಿರಬಹುದೆಂಬ ಅಭಿಪ್ರಾಯ ವ್ಯಕ್ತವಾಗಿರುತ್ತದೆ.<br><br>ಈ ಬಗ್ಗೆ, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ:-<br><br>• ವಿಶೇಷ ಡ್ರೈವ್ ಗಳನ್ನು ಹಮ್ಮಿಕೊಂಡು ಮಾದಕ ವಸ್ತು ಸೇವನೆ ಮಾಡುವವರ ವಿರುದ್ಧ ಪ್ರಕರಣ ದಾಖಲು ಮಾಡಿ ಕ್ರಮಕೈಗೊಳ್ಳಲಾಗುತ್ತಿದೆ.</td>
</tr>
</table>

| | | |
|---|---|---|
| | | • ಮೈಸೂರು ನಗರ ವ್ಯಾಪ್ತಿಯಲ್ಲಿ ವಿಶೇಷವಾಗಿ ಶ್ವಾನದಳದಿಂದ ಮಾದಕ ವಸ್ತುಗಳ ಶೇಖರಣೆ ಪತ್ತೆ ಬಗ್ಗೆ ಹಾಗೂ ಕೊರಿಯರ್ ಕಛೇರಿಗಳಲ್ಲಿ ಮತ್ತು ಅನುಮಾನಾಸ್ಪದ ಸ್ಥಳಗಳಲ್ಲಿ ತಪಾಸಣೆ ಮಾಡಿ ಮಾದಕ ವಸ್ತು ಅಕ್ರಮ ಸಾಗಾಟದ ಬಗ್ಗೆ ಮುನ್ನೆಚ್ಚರಿಕಾ ಕ್ರಮಕೈಗೊಂಡು ಡ್ರಗ್ಸ್ ಹಾವಳಿಯನ್ನು ತಡೆಗಟ್ಟಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಪ್ರತಿ ದಿನ ಸಹಾಯಕ ಪೊಲೀಸ್ ಆಯುಕ್ತರನ್ನೊಳಗೊಂಡಂತೆ ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಶಾಲಾ-ಕಾಲೇಜು, ಪಾರ್ಕ್ ಗಳು ವಿವಿಧ ಸಂಸ್ಥೆ ಹಾಗೂ ಕಛೇರಿಗಳಿಗೆ ಭೇಟಿ ನೀಡಿ ಮಾದಕ ವಸ್ತುವಿನಿಂದಾಗುವ ದುಷ್ಪರಿಣಾಮದ ಬಗ್ಗೆ ಅರಿವು ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳುವುದರ ಮೂಲಕ ತಡೆಗಟ್ಟಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಪೊಲೀಸ್ ಠಾಣೆಗಳ ಬೀಟ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಸಭೆಗಳನ್ನು ಹಮ್ಮಿಕೊಂಡು ಸಾರ್ವಜನಿಕರಿಗೆ ಮಾದಕ ದ್ರವ್ಯಗಳ ಸೇವನೆಯಿಂದಾಗುವ ದುಷ್ಪರಿಣಾಗಳ ಕುರಿತು 'ನಶೆ ಮುಕ್ತ ಕರ್ನಾಟಕ' ಮೊಬೈಲ್ ಆಪ್ ಬಗ್ಗೆ ಅರಿವು ಮೂಡಿಸಿ ತಡೆಗಟ್ಟಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಅಂತಹವರ ವಿರುದ್ಧ ಗಡಿಪಾರು ಮಾಡುವುದರ ಮೂಲಕ ಡ್ರಗ್ ಹಾವಳಿಯನ್ನು ನಿಯಂತ್ರಿಸಲಾಗುತ್ತಿದೆ.<br>• ಪುನರಾವರ್ತಿತ ಆರೋಪಿಗಳ ವಿರುದ್ಧ ಪಿ.ಐ.ಟಿ. ಎನ್. ಡಿ. ಪಿ. ಎಸ್ ಕಾಯ್ದೆ-1988 ರೀತ್ಯಾ ಪ್ರಸ್ತಾವನೆ ಸಲ್ಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>ಮನೆ ಮನೆ ಪೊಲೀಸ್ ಪರಿಕಲ್ಪನೆ ಅಡಿಯಲ್ಲಿ ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಮಾಹಿತಿಯನ್ನು ಕಲೆ ಹಾಕಿ ಡ್ರಗ್ಸ್ ಹಾವಳಿಯ ವಿರುದ್ಧ ಕ್ರಮಕೈಗೊಳ್ಳಲಾಗುತ್ತಿದೆ. |
| (ಇ) | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದಕ ದ್ರವ್ಯ ಸೇವನೆ ಮತ್ತು ಅದನ್ನು ವಿತರಣೆ ಮಾಡುವವರ ವಿರುದ್ಧ ಸರ್ಕಾರದಿಂದ ಎಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ; ಇದರ ಹಿಂದೆ ಇರುವ ವ್ಯಕ್ತಿಗಳಿಗೆ ಇಲಾಖೆ ತನಿಖೆ ನಡೆಸಿದೆಯೇ; (ವಿವರ ನೀಡುವುದು); | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದಕ ದ್ರವ್ಯ ಸೇವನೆ ಮತ್ತು ಅದನ್ನು ವಿತರಣೆ ಮಾಡುವವರ ವಿರುದ್ಧ ದಾಖಲಾಗಿರುವ ಪ್ರಕರಣಗಳ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲು ಕ್ರಮವಹಿಸಲಾಗುತ್ತಿದೆ. |
| (ಈ) | ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಅರಿವು ಮೂಡಿಸಲು ಮತ್ತು ಈ ಚಟದಿಂದ ದೂರ ಇರಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮಗಳೇನು? (ವಿವರ ನೀಡುವುದು) | ಶಾಲಾ ಕಾಲೇಜು ಆವರಣದಲ್ಲಿ ಜಾಗೃತಿ/ ಅರಿವು ಮೂಡಿಸಲು ಈ ಕೆಳಕಂಡಂತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:-<br>➢ ಶಾಲಾ-ಕಾಲೇಜುಗಳ ಪ್ರದೇಶಗಳಲ್ಲಿ ಮಾದಕ ವಸ್ತುಗಳ ಸೇವನೆ ಮತ್ತು ಮಾರಾಟ ಮಾಡುವ ಕುರಿತು ಶೈಕ್ಷಣಿಕ ಶಾಲಾ ಕಾಲೇಜುಗಳ ಮುಖ್ಯಸ್ಥರನ್ನು ಸಂಪರ್ಕಿಸಿ ಅವರ ಶಾಲಾ ಕಾಲೇಜುಗಳ ವ್ಯಾಪ್ತಿಯ 100 ಮೀಟರ್ ಅಂತರದಲ್ಲಿ ಮಾದಕ ವಸ್ತುಗಳ ಹಾಗೂ ಇನ್ನಿತರೆ ಮಂಪರು ಬರಿಸುವ ವಸ್ತುಗಳನ್ನು ಮಾರಾಟ ಮಾಡುವ ಅಂಗಡಿ ಮತ್ತು ಅಂತಹ ವಸ್ತುಗಳನ್ನು ಮಾರಾಟ ಮಾಡುವವರು ಕಂಡು ಬಂದಲ್ಲಿ ಅವರ ವಿರುದ್ಧವೂ ಸಹ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಪೊಲೀಸ್ ಠಾಣೆಗಳ ಸರಹದ್ದಿನಲ್ಲಿ ಗಾಂಜಾ, ಅಫೀಮು ಮತ್ತು ಡ್ರಗ್ಸ್ ಮಾದಕ ವಸ್ತುಗಳ ಹಾವಳಿಯನ್ನು ತಡೆಗಟ್ಟಲು ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗತ್ತಿದ್ದು, ಶಾಲಾ-ಕಾಲೇಜು ವಿದ್ಯಾರ್ಥಿಗಳು ಮಾದಕ ವಸ್ತುಗಳ ವ್ಯಸನಕ್ಕೆ ಬೀಳದಂತೆ ಅವರಲ್ಲಿ ಮಾದಕ ವಸ್ತು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಆಗಿಂದಾಗ್ಗೆ ಶಾಲಾ-ಕಾಲೇಜುಗಳಲ್ಲಿ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಶಾಲಾ ಕಾಲೇಜುಗಳ ಆವರಣದಲ್ಲಿ ಹಾಗೂ ಅಕ್ಕಪಕ್ಕದ ಪ್ರದೇಶಗಳಲ್ಲಿ ಪೊಲೀಸ್ ಗಸ್ತು ಕರ್ತವ್ಯವನ್ನು ಹೆಚ್ಚಿಸಿದ್ದು ಮಾದಕ ವಸ್ತು ಮಾರಾಟ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಶಾಲಾ-ಕಾಲೇಜು ಮುಖ್ಯಸ್ಥರಿಂದ ಹಾಗೂ ಸಾರ್ವಜನಿಕರಿಂದ ಮಾದಕ ವಸ್ತುಗಳ ಮಾರಾಟದ ಬಗ್ಗೆ ಠಾಣೆಗೆ ಮಾಹಿತಿ ಬಂದ ಕೂಡಲೇ |

| | | |
|---|---|---|
| | | ಠಾಣಾಧಿಕಾರಿಗಳು ಕ್ಷಿಪ್ರಗತಿಯಲ್ಲಿ ಮೊಕದ್ದಮೆಗಳನ್ನು ದಾಖಲು ಮಾಡಿ ಕಾನೂನಿನಡಿಯಲ್ಲಿ ಕ್ರಮವಹಿಸುವಂತೆ ಸೂಚನೆಗಳನ್ನು ನೀಡಿ, ಅದರಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಠಾಣಾ ಸರಹದ್ದುಗಳಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುವುದು ಕಂಡು ಬಂದಲ್ಲಿ ಹಾಗೂ ಕಾಲೇಜುಗಳ ಬಳಿ ಸಿಬ್ಬಂದಿಗಳನ್ನು ಸಾದಾ ಉಡುಪಿನಲ್ಲಿ ನೇಮಿಸಿ ಮಾದಕ ವಸ್ತುಗಳ ಮಾರಾಟದ ಕುರಿತು ಮಾಹಿತಿ ಸಂಗ್ರಹಿಸಿ, ಈ ಬಗ್ಗೆ ಖಚಿತ ಮಾಹಿತಿ ದೊರೆತಲ್ಲಿ ಆರೋಪಿಗಳ ವಿರುದ್ಧ ಎನ್.ಡಿ.ಪಿ.ಎಸ್.ಕಾಯ್ದೆ-1985 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿದೆ.<br>➢ ಮಾದಕ ವಸ್ತು ಮಾರಾಟ ಮತ್ತು ಸೇವನೆ ಮಾಡುವವರ ಬಗ್ಗೆ ಮಾಹಿತಿ ನೀಡಲು ಸಹಾಯವಾಣಿ ಸಂಖ್ಯೆ: 1933 ಯನ್ನು ಸ್ಥಾಪಿಸಿದ್ದು, ವ್ಯಾಪಕವಾಗಿ ಪ್ರಚಾರ ಮಾಡಿ ಮಾಹಿತಿ ನೀಡುವವರ ವಿವರಗಳನ್ನು ಗೌಪ್ಯವಾಗಿ ಇಡಲಾಗುತ್ತಿದೆ. |

(ಡಾ: ಜಿ . ಪರಮೇಶ್ವರ)
ಗೃಹ ಸಚಿವರು

ಒಇ 8 ಪಿಎನ್‌ಡಿ 2026 (ಇ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 377 ಕ್ಕೆ ಸಂಬಂಧಿಸಿದೆ.

# ಅನುಬಂಧ

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎನ್.ಡಿ.ಪಿ.ಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳು

### 2023

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ | ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತದೆ |
|---|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | | |
| 1 | ಮಂಗಳೂರು ನಗರ | 713 | 942 | 06 | 0 | 199 | 749 | |
| 2 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು | 66 | 85 | 0 | 0 | 29 | 56 | |

### 2024

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ | ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತದೆ |
|---|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | | |
| 1 | ಮಂಗಳೂರು ನಗರ | 1114 | 1398 | 06 | 0 | 160 | 1244 | |
| 2 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು | 44 | 61 | 0 | 0 | 16 | 45 | |

### 2025

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ | ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತದೆ |
|---|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | | |
| 1 | ಮಂಗಳೂರು ನಗರ | 717 | 953 | 01 | 0 | 231 | 723 | |
| 2 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು | 29 | 51 | 0 | 0 | 31 | 20 | |

### 2026

| ಕ್ರ. ಸಂ | ಘಟಕ | ಎನ್‌ಡಿಪಿಎಸ್ ಕಾಯ್ದೆಯಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ | ದಸ್ತಗಿರಿಯಾದ ಆರೋಪಿಗಳ ಸಂಖ್ಯೆ | | ದಸ್ತಗಿರಿಯಾದ ಉತ್ಪಾದಕರ ಸಂಖ್ಯೆ | ದಸ್ತಗಿರಿಯಾದ ಮಾರಾಟಗಾರರ ಸಂಖ್ಯೆ | ದಸ್ತಗಿರಿಯಾದ ವ್ಯಸನಿಗಳ ಸಂಖ್ಯೆ | ಆರೋಪಿಗಳ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗುತ್ತದೆ |
|---|---|---|---|---|---|---|---|---|
| | | | ಭಾರತೀಯರು | ವಿದೇಶಿಯರು | | | | |
| 1 | ಮಂಗಳೂರು ನಗರ | 44 | 62 | 0 | 0 | 20 | 42 | |
| 2 | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು | 04 | 06 | 0 | 0 | 05 | 01 | |